ದಿಃ **14-12-2023** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.
<u>ಪಾಟೀ ಸವಾಲುಃ</u> ಪ್ರತಿವಾದಿಯರ ಪರ ವಕೀಲರಾದ ಶ್ರೀ. ಬಿ.ಎಸ್.ಕೆ. ರವರಿಂದ

ಸಂಭಾಜಿ ದೇಶಪಾಂಡೆರವರಿಗೆ ಒಟ್ಟು ಮೂರು ಜನ ಮಕ್ಕಳು ಇರುತ್ತಾರೆ. ಅವರ ಹೆಸರು ಗಂಗಾಧರ, ವೆಂಕಟೇಶ ಮತ್ತು ಹಣಮಂತ ಇರುತ್ತದೆ. ಸಂಭಾಜಿ ದೇಶಪಾಂಡೆ ರವರ ಹೆಂಡತಿ **1992** ರಲ್ಲಿ ಮೃತರಾಗಿರುತ್ತಾರೆ. ವಾದಿ **1** ಗಂಗಾಧರ ರವರು **2022** ರಲ್ಲಿ ಮೃತರಾಗಿರುತ್ತಾರೆ. ಮೃತ ವಾದಿ **1** ರವರಿಗೆ ವಾದಿ **1** ಎ, **1** ಬಿ ಹಾಗೂ ಗೋವಿಂದ ದೇಶಪಾಂಡೆ ಎನ್ನುವ ಮಕ್ಕಳಿದ್ದರು, ಅದರಲ್ಲಿ ಗೋವಿಂದ ದೇಶಪಾಂಡೆಯವರು ಮೃತರಾಗಿರುತ್ತಾರೆ. ಗೋವಿಂದ ದೇಶಪಾಂಡೆ ರವರಿಗೆ ಇಬ್ಬರು ಮಕ್ಕಳಿರುತ್ತಾರೆ.

**2.** ನನಗೆ ವಾದಿ **1** ಬಿ ರವರು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಈ ದಾವೆಯನ್ನು ಮೃತ ವಾದಿ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ. ಈ ದಾವೆಯನ್ನು ಪ್ರತಿವಾದಿಯರು ದಾವಾಸ್ವತ್ತಿನ ಕುರಿತು ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿರುತ್ತಾರೆ ಎಂದು ವಾದಿ ದಾವೆ ಸಲ್ಲಿಸಿರುತ್ತಾರೆ. ದಾವಾಸ್ವತ್ತಿನ ಸರ್ವೆ ನಂ. **21** ಇರುತ್ತದೆ. ದಾವಾಸ್ವತಿನ ಚಕಂಬದಿ ನನಗೆ ಗೊತ್ತಿರುತ್ತದೆ. ಪೂರ್ವಕ್ಕೆ ಸರಕಾರಿ ಹಳ್ಳ ಇರುತ್ತದೆ, ಪಶ್ಚಿಮಕ್ಕೆ ಸರಕಾರಿ ಕಾಲುವೆ ಇರುತ್ತದೆ, ಉತ್ತರಕ್ಕೆ ಸರಕಾರಿ ರಸ್ತೆ ಇರುತ್ತದೆ ಮತ್ತು ದಕ್ಷಿಣಕ್ಕೆ ಅಪ್ಪಯ್ಯಾ ಕಿಚಡಿ ರವರ ಜಮೀನು ಇರುತ್ತದೆ. ದಾವಾಸ್ವತ್ತಿನ ಚಕಬಂದಿ ನಾನು ಮೇಲೆ ಹೇಳಿದಂತೆ ಇರುತ್ತದೆ ಎಂದು ತೋರಿಸಲು ಯಾವದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲಾ ಎಂದರೆ ಸಾಕ್ಷಿಯು ಮೃತ ವಾದಿ **1** ರವರು ಹಾಜರುಪಡಿಸಿರುತ್ತಾರೆ ಎಂದು ನುಡಿಯುತ್ತಾರೆ.

**3.** ವಾದಿ **1** ರವರ ಸಹೋದರರಾದ ವೆಂಕಟೇಶ ಮತ್ತು ಹಣಮಂತ ರವರು ಬಡಿಗವಾಡದಲ್ಲಿ ವಾಸವಾಗಿರುತ್ತಾರೆ. ಸದರಿ ವೆಂಕಟೇಶ ಮತ್ತು ಹಣಮಂತರವರಿಗೂ ದಾವಾಸ್ವತ್ತಿಗೂ ಯಾವದೇ ಸಂಬಂಧವಿರುವುದಿಲ್ಲಾ ಎಂದರೆ ಸರಿ. ಸದರಿ ವೆಂಕಟೇಶ ಮತ್ತು ಹಣಮಂತರವರು ಮೃತ ವಾದಿ **1** ರವರಿಗೆ ಈ ದಾವೆ ಸಲ್ಲಿಸಲು ಯಾವದೇ ಅಧಿಕಾರ ಪತ್ರ ನೀಡಿರುವುದಿಲ್ಲಾ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಒಪ್ಪಿಗೆ ಪತ್ರ ಮಾಡಿಕೊಟ್ಟಿತ್ತಾರೆ ಎಂದು ನುಡಿಯುತ್ತಾರೆ. ನಾನು ಸದರಿ ಒಪ್ಪಿಗೆ ಪತ್ರವನ್ನು ನೋಡಿರುತ್ತೇನೆ. ಅದನ್ನು ವಾದಿ **1** ರವರು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸದರಿ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ವಾದಿ **1** ರವರ ಸಹೋದರರಾದ ವೆಂಕಟೇಶ ಮತ್ತು ಹಣಮಂತರವರು ದಾವಾಸ್ವತ್ತಿನಲ್ಲಿ ತಮ್ಮ ಮನೆತನಕ್ಕೆ ದಾವಾಸ್ವತ್ತಿನ ಮೇಲೆ ಯಾವದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದ ಕಾರಣ ಈ ದಾವೆ ಸಲ್ಲಿಸಲು ಅವರು ವಾದಿ **1** ರವರ ಜೊತೆಗೆ ಕೂಡಿಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ.

**5.** ರಿ.ಸ.ನಂ. **21/1** ಎ ರ ಮಂಜುಳಾ ಸರ್ಜೆರಾವ ದೇಶಪಾಂಡೆ ರವರಿಗೆ ಸೇರಿದ **5** ಎಕರೆ **27** ಗುಂಟೆ ಜಮೀನಿನ ಕುರಿತು ಸಣ್ಣಭೀಮಪ್ಪಾ ಕಿಚಡಿ ರವರಿಗೆ ಭೂನ್ಯಾಯ ಮಂಡಳಿಯವರು **2003** ರಲ್ಲಿ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಅದರಂತೆ ದುಂಡಪ್ಪಾ ಕಟ್ಟಿಕಾರ ರವರು ರಿ.ಸ. ನಂ. **21/1** ಎ ರ **5** ಎಕರೆ **10** ಗುಂಟೆ ಜಮೀನು ಮಂಜೂರು ಮಾಡಬೇಕು ಎಂದು ಕೋರಿಕೊಂಡು ಸಹಾಯಕ ಕಮೀಷನರ್ ಬೈಲಹೊಂಗಲ ಕ್ಯಾಂಪ್ ಗೋಕಾಕ ರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯನ್ನು ಶಾಮಜೀ ಗಣೇಶ ದೇಶಪಾಂಡೆ, ಗಂಗೂಬಾಯಿ ಸಂಭಾಜಿ ದೇಶಪಾಂಡೆ,

ರಾಜೇಂದ್ರ ಸರ್ಜೆರಾವ ದೇಶಪಾಂಡೆ ರವರ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಶಾಮಜೀ ಗಣೇಶ ದೇಶಪಾಂಡೆ ರವರ ವಿರುದ್ಧ ಮಾತ್ರ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಸದರಿ ದುಂಡಪ್ಪಾ ಕಟ್ಟಿಕಾರ ರವರಿಗೆ ಭೂನ್ಯಾಯ ಮಂಡಳಿಯವರು ರಿ.ಸ.ನಂ. **21/1** ಎ ರಲ್ಲಿನ **5** ಎಕೆರ **10** ಗುಂಟೆ ಜಮೀನನ್ನು ದಿಃ **26-06-2002** ರಂದು ಮಂಜೂರು ಮಾಡಿದ್ದರು ಎಂದರೆ ಸರಿ. ಸದರಿ ಮಂಜೂರಾತಿ ಆದೇಶವನ್ನು ಪ್ರಶ್ನಿಸಿ ಯಾರೂ ಮೇಲ್ಮನವಿ ಸಲ್ಲಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಯಾರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಮೃತ ವಾದಿ **1** ರವರು ನ್ಯಾಯಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಂತಹ ಮೇಲ್ಮನವಿ ದಾಖಲೆಯನ್ನು ನಾನು ನೋಡಿರುತ್ತೇನೆ. ವಾದಿ **1** ರವರು ಈ ದಾವೆಯಲ್ಲಿ ಸದರಿ ಮೇಲ್ಮನವಿ ದಾಖಲೆಯನ್ನು ಹಾಜರುಪಡಿಸಿರುತ್ತಾರೆ.

**6.** ನಾನು **1975** ರಲ್ಲಿ ಜನಿಸಿರುತ್ತೇನೆ. ಸಂಭಾಜೀ ದೇಶಪಾಂಡೆ ರವರ ಹೆಂಡತಿ ಗಂಗೂಬಾಯಿ ಮತ್ತು ಅವರ ಮೂರು ಜನ ಮಕ್ಕಳ ಮಧ್ಯ ತಮಗೆ ಸೇರಿದ ಜಮೀನುಗಳಲ್ಲಿ **1966** ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಂದಾಯ ದಾಖಲೆಗಳಲ್ಲಿ **1966** ರಲ್ಲಿ ಎಂ.ಇ. ನಂ. **771** ರಂತೆ ದಾಖಲಾಗಿರುತ್ತದೆ ಎಂದರೆ ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ವಾಟ್ನಿಯಂತೆ ಬಡಿಗವಾಡ ಗ್ರಾಮದ ರಿ.ಸ.ನಂ. **21** ರ ಜಮೀನಿನ **22** ಎಕರೆ **33** ಗುಂಟೆ ಜಮೀನಿನಲ್ಲಿ ಇದ್ದ **1/8** ಹಿಸ್ಸೆ ಸಂಭಾಜಿ ದೇಶಪಾಂಡೆ ಮತ್ತು ಆತನ ಹೆಂಡತಿ ಗಂಗೂಬಾಯಿ ರವರಿಗೆ ಬಂದಿತ್ತು ಎಂದರೆ ಸರಿ. ಸದರಿ **1/8** ಹಿಸ್ಸೆಯಲ್ಲಿ ಸಂಭಾಜಿ ದೇಶಪಾಂಡೆ ಮತ್ತು ಆತನ ಹೆಂಡತಿ ಗಂಗೂಬಾಯಿ ರವರು ದುಂಡಪ್ಪಾ ಕಟ್ಟಿಕಾರ ರವರಿಗೆ ಭೂನ್ಯಾಯ ಮಂಡಳಿಯರು ಜಮೀನು ಮಂಜೂರು ಮಾಡುವವರೆಗೆ ಮಾಲ್ಕಿ ನಾತೆಯಿಂದ ಇದ್ದರು ಎಂದರೆ ಸಾಕ್ಷಿಯು ಸಂಭಾಜಿ ದೇಶಪಾಂಡೆ ಮತ್ತು ಆತನ ಹೆಂಡತಿ ಗಂಗೂಬಾಯಿ ರವರು ಜೀವಂತ ಇರುವವರೆಗೆ ಸ್ವಾಧೀನಾನುಭವದಲ್ಲಿ ಇದ್ದು ಅವರು ಮೃತರಾದ ನಂತರ ಅವರ ವಾರಸುದಾರರು ಸ್ವಾಧೀನಾನುಭದಲ್ಲಿ ಇರುತ್ತಾರೆ ಎಂದು ನುಡಿಯತ್ತಾರೆ. ಸದರಿ ಸಂಗತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದುಂಡಪ್ಪಾ ಕಟ್ಟಿಕಾರ ರವರಿಗೆ ಭೂನ್ಯಾಯ ಮಂಡಳಿಯವರು ಮಂಜೂರು ಮಾಡಿದ **5** ಎಕರೆ **10** ಗುಂಟೆ ಜಮೀನಿನಲ್ಲಿ ಸಂಭಾಜಿ ದೇಶಪಾಂಡೆ ಮತ್ತು ಆತನ ಹೆಂಡತಿ ಗಂಗೂಬಾಯಿ ರವರಿಗೆ ಸೇರಿದ **1/8** ಹಿಸ್ಸೆಯೂ ಸಹ ಒಳಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದುಂಡಪ್ಪಾ ಕಟ್ಟಿಕಾರ ರವರಿಗೆ ಮಂಜೂರು ಮಾಡಿದ **5** ಎಕರೆ **10** ಗುಂಟೆ ಜಮೀನಿನಲ್ಲಿ ರಾಜೇಂದ್ರ ಸರ್ಜೆರಾವ ದೇಶಪಾಂಡೆ ರವರಿಗೆ ಸೇರಿದ **1** ಎಕರೆ **36** ಗುಂಟೆ, ಗಂಗೂಬಾಯಿ ಮತ್ತು ಸಂಭಾಜಿ ದೇಶಪಾಂಡೆ ರವರಿಗೆ ಸೇರಿದ **1/8** ಹಿಸ್ಸೆಯ **2** ಎಕರೆ **34** ಗುಂಟೆ ಹಾಗೂ ಶಾಮಜೀ ಗಣೇಶ ದೇಶಪಾಂಡೆ ರವರಿಗೆ ಸೇರಿದ **20** ಗುಂಟೆ ಕೂಡಿ **5** ಎಕರೆ **10** ಗುಂಟೆ ಜಮೀನು ದುಂಡಪ್ಪಾ ಕಟ್ಟಿಕಾರ ರವರಿಗೆ ಮಂಜೂರು ಮಾಡಿದ್ದರು ಎಂದರೆ ಸಾಕ್ಷಿಯು ಸಂಭಾಜಿ ದೇಶಪಾಂಡೆ ಮತ್ತು ಆತನ ಹೆಂಡತಿ ಗಂಗೂಬಾಯಿ ರವರಿಗೆ ಸೇರಿದ **1/8** ಹಿಸ್ಸೆ ಒಳಗೊಂಡಿರುವುದಿಲ್ಲಾ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

Sd/-

(ರಾಜೀವ ಗೋಳಸಾರ.)
ಪ್ರ.ದಿ.&ನ್ಯಾದಂ., ಗೋಕಾಕ.